ಈಗಾಗಲೇ ನಾನು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ, ಸರ್ಕಾರ ಯಾವುದಕ್ಕಾದರೂ ವಿನಾಯಿತಿ ಕೊಡಬಹುದು. ಆದರೆ ಅದನ್ನು ಸರ್ಕಾರ ತೀರ್ಮಾನ ಮಾಡಬೇಕು. ಬೇರೆಯವರಿಗೆ ಆ ಅಧಿಕಾರ ಇಲ್ಲ. ಆ ದಿಕ್ಕಿನಲ್ಲಿ ಏನು ಕ್ರಮದ ಅಗತ್ಯವಿದೆ, ಅದನ್ನು ತೆಗೆದುಕೊಳ್ಳುತ್ತೇವೆ ಎಂದು ನಾನು ಆಶ್ವಾಸನೆಯನ್ನು ಕೊಡಲು ಇಚ್ಛಿಪಡುತ್ತಿದ್ದೇನೆ.

(ಉ) ಉಲ್ಲಾಳ ಕ್ಷೇತ್ರಕ್ಕೆ ಮೂಲಭೂತ ಸೌಲಭ್ಯ.

+ ಶ್ರೀ ಕೆ. ಜಯರಾಮಶೆಟ್ಟಿ (ಉಲ್ಲಾಳ) :— ಸನ್ಮಾನ್ಯ ಉಪಾಧ್ಯಕ್ಷರೇ, ಮಂಗಳೂರು ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿ, ವಿಶೇಷವಾಗಿ ನನ್ನ ಕ್ಷೇತ್ರವಾದ ಉಲ್ಲಾಳದಲ್ಲಿ ಬಹಳಷ್ಟು ಜನ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅಂದರೆ ಮನೆ ನಿವೇಶನ ಇಲ್ಲದೇ ಇರುವವರು, ಮನೆ ನಿವೇಶನವಿದ್ದೂ ಹಕ್ಕುಪತ್ರ ಸಿಗದವರು, ಅವರೆಡೂ ಇಲ್ಲದೆ ರೇಷನ್ ಕಾರ್ಡು ಸಿಗದವರು, ಮನೆ ನಿವೇಶನ ಅಥವಾ ಹಕ್ಕುಪತ್ರ ಸಿಗಲಿಲ್ಲವೆನ್ನುವ ಕಾರಣಕ್ಕೋಸ್ಕರ ಅವರ ಮನೆಗಳಿಗೆ ಕರೆಂಟ್ ಕನೆಕ್ಷನ್ ಸಿಗದೇ ಇರುವಂಥವರು, ಈ ರೀತಿ ಸುಮಾರು 50 ಸಾವಿರಕ್ಕಿಂತ ಹೆಚ್ಚು ಜನ ಮಂಗಳೂರು ತಾಲ್ಲೂಕಿನಲ್ಲಿದ್ದಾರೆ. ಮಂಗಳೂರು ಜಿಲ್ಲೆಯಲ್ಲಿ ಸುಮಾರು ಒಂದೂವರೆ ಲಕ್ಷದಷ್ಟು ಜನರು ಈ ಮೂಲ ಸಮಸ್ಯೆಗಳಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಕಳೆದ 2-3 ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಸಭೆಯಲ್ಲಿ, ಮಂಗಳೂರು ತಾಲ್ಲೂಕು ಸಮಿತಿ ಸಭೆಯಲ್ಲಿ, ಎ.ಡಿ.ಪಿ. ಸಭೆಯಲ್ಲಿ ಇದು ಹಲವಾರು ಬಾರಿ ಚರ್ಚೆಯಾಗಿದೆ. ಮಾನ್ಯ ಮಂತ್ರಿಗಳ ಗಮನಕ್ಕೂ ಇದು ಬಂದಿದೆ. ಈ ಸಮಸ್ಯೆಗಳು ಈಗಲೂ ಹಾಗೆಯೇ ಇವೆ. ಆದ್ದರಿಂದ ಹಕ್ಕುಪತ್ರ ಸಿಗದೇ ಇರುವಂಥಾದ್ದು, ಅಂಬೇಡ್ಕರ್, ಆಶ್ರಯ ಮನೆಗಳು ಸಿಗದೇ ಇರುವಂಥಾದ್ದು, ಮನೆಯಿದ್ದೂ ಕರೆಂಟ್ ಕನೆಕ್ಷನ್ ಸಿಗದೇ ಇರುವಂಥವಾದ್ದು ಇಂಥ ಬಹಳಷ್ಟು ಸಮಸ್ಯಗಳ ಬಗ್ಗೆ ನಾನು ಕಂದಾಯ ಮಂತ್ರಿಗಳ ಹತ್ತಿರ ವಿನಂತಿ ಮಾಡುತ್ತಿದ್ದೇನೆ, ತಾವು ಜನಗಳ ಸಮಸ್ಯೆಗೆ ದಯವಿಟ್ಟು ಸ್ಪಂದಿಸಿ, ಅಲ್ಲಿ ಕಳೆದ 10 ವರ್ಷಗಳಿಂದ ಯಾರ್ಯಾರು ಈ ರೀತಿಯಲ್ಲಿ ಅಕ್ರಮವಾಗಿ ಕುಳಿತುಕೊಂಡಿದ್ದಾರೆ, ಕೆಲವು ಕಡೆ ಹಕ್ಕುಪತ್ರ ಸಿಕ್ಕಿದವರಿಗೆ ನಿವೇಶನವನ್ನು ಕೊಟ್ಟಿಲ್ಲ. ಸರ್ಕಾರ ಅಧಿಕೃತವಾಗಿ ಹಕ್ಕುಪತ್ರ ಕೊಟ್ಟಿದೆ. ಆದರೆ ನಿವೇಶನವನ್ನು ಕೊಡಲಿಲ್ಲ. ಇಂಥ ಜನರ ಸರ್ವೆ ಮಾಡಿಸಿ, ಅವರು ಕಳೆದ 5-10 ವರ್ಷಗಳಿಂದ ಅಲ್ಲಿ ಇದ್ದರೆ ಅವರಿಗೆ ಮನೆ ನಿವೇಶನ ಹಕ್ಕುಪತ್ರ ಅಥವಾ ಡೋರ್ ನಂಬರ್ ಕೊಡುವಂಥಾದ್ದು ಆಗಬೇಕು. ಮನೆ ನಿವೇಶನಗಳಲ್ಲಿ ಅಕ್ರಮವಾಗಿ ಕುಳಿತುಕೊಂಡಿದ್ದಾರೆ ಎಂದು ಯಾವ ಸೌಲಭ್ಯವನ್ನೂ ಕೊಡುವುದಿಲ್ಲ. ಡೋರ್ ನಂಬರ್ ಕೂಡ ಕೊಡುವುದಿಲ್ಲ. ಡೋರ್ ನಂಬರ್ ಸಿಗದಿದ್ದರೆ ಓಟರ್ಸ್ ಲಿಸ್ಟ್‌ನಲ್ಲಿ ಅವರು ಹೆಸರು ಬರುವುದಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಏನು ಪ್ರಾಥಮಿಕ ಸೌಲಭ್ಯಗಳು ಬೇಕೋ ಅದನ್ನು ಕೊಡುತ್ತಿಲ್ಲ. ಆದ್ದರಿಂದ ತಾವು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಸುಮಾರು 50 ಸಾವಿರ ಜನರು ತೊಂದರೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ, ಅವರಿಗೆ ಏನಾದರೂ ವ್ಯವಸ್ಥೆ ಮಾಡಿಕೊಡಬೇಕು ಎಂದು ನಾನು ಕಂದಾಯ ಮಂತ್ರಿಗಳಲ್ಲಿ ವಿನಂತಿ ಮಾಡತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಉಪಾಧ್ಯಕ್ಷರೇ, ಜಯರಾಮಶೆಟ್ಟರು ಎತ್ತಿರುವಂಥ ವಿಚಾರ ಮೊನ್ನೆಯೇ ಶೂನ್ಯವೇಳೆಯಲ್ಲಿ ಬರಬೇಕಾಗಿತ್ತು. ಆದರೆ ನಾನು ಸದನದಲ್ಲಿ ಇರಲಿಲ್ಲವಾದ ಕಾರಣ ಇವತ್ತು ಚರ್ಚೆಗೆ ಬಂದಿದೆ. ನಮ್ಮ ಮೂಲ ಸಮಸ್ಯೆ ಏನೆಂದರೆ, ಅದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರಬಹುದು ಅಥವಾ ಬೇರೆ ಜಿಲ್ಲೆಗಳಲ್ಲಿ ಇರಬಹುದು, ಅಲ್ಲಿ ಸರ್ಕಾರಿ ಜಮೀನುಗಳಲ್ಲಿ ಕೆಲವರು ಸುಮಾರು ಹತ್ತಾರು ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಅದು 20-25 ವರ್ಷವೂ ಆಗಿರಬಹುದು. ಇದು ಮಂಗಳೂರು ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ, ಎಲ್ಲಾ ಜಿಲ್ಲೆಗಳಲ್ಲಿ, ಎಲ್ಲಾ ತಾಲ್ಲೂಕಿನಲ್ಲೂ ಇದೆ. ನಮ್ಮ ತಾಲ್ಲೂಕಿನಲ್ಲಿ ಆ ರೀತಿಯ ಸುಮಾರು 4-5 ಸಾವಿರ ಮನೆಗಳು ಬರುತ್ತವೆ. ಕೆಲವರು ಏಲಿಯನೇಷನ್ ಮಾಡಿಸಿಕೊಳ್ಳದೇ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇನ್ನೂ ಕೆಲವರು ಸರ್ಕಾರಿ ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆದರೆ ಅವರನ್ನು ಹೊರಗಡೆ ಕಳುಹಿಸಲು ಆಗುವುದಿಲ್ಲ. ಏಕೆಂದರೆ, ಅವರೆಲ್ಲರೂ ಬಡವರಾಗಿದ್ದಾರೆ, ಬೇರೆ ಕಡೆ ವಾಸ ಮಾಡಲು ಸ್ಥಳ ಇಲ್ಲ. ಅವರ ಹೆಸರಿಗೆ ಖಾತೆಯಾಗದೇ ಬೇರೆ ಯಾವುದೇ ಸವಲತ್ತುಗಳನ್ನು ಕೊಡಲು ಆಗುವುದಿಲ್ಲ. ಅದು ಎಲೆಕ್ಟ್ರಿಸಿಟಿ ಇರಬಹುದು, ಹಸಿರು ಕಾರ್ಡ್ ಇರಬಹುದು, ಲೋನ್ ಇರಬಹುದು, ಇಂಥ ಯಾವುದೇ ಅಭಿವೃದ್ಧಿ ಕೆಲಸಕ್ಕೂ ಅವಕಾಶವಿಲ್ಲ. ಇದಕ್ಕೆ ಮೂಲ ಕಾರಣವೆಂದರೆ ಅವರ ಹೆಸರಿಗೆ ಖಾತೆಯಾಗಲೀ ಇರುವುದು, ಏಲಿಯನೇಷನ್ ಮಂಜೂರಾತಿ ಆಗದೇ ಇರುವುದು. ನಾನು ಈ ಬಗ್ಗೆ ಯೋಚನೆ ಮಾಡಿದ್ದೇನೆ. ಇದಕ್ಕೆ ಕೆಲವು ತಿದ್ದುಪಡಿಗಳ ಅವಶ್ಯಕತೆ ಇದೆ. ಬಹಳ ವರ್ಷಗಳಿಂದ ಇದು ಆಗಿಲ್ಲ. ಆ ತಿದ್ದುಪಡಿ ಏನೆಂದರೆ, ಸರ್ಕಾರೀ ಜಮೀನಿನಲ್ಲಿ ಕೆಲವರು ಹತ್ತಾರು ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು, ಅವರ ಹೆಸರಿಗೆ ಖಾತೆ ಇಲ್ಲದೆ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಈ ರೀತಿ ಈ ವರ್ಷದವರೆಗೆ ಕಟ್ಟಿಕೊಂಡಿರುವವರನ್ನು ಗಣನೆಗೆ ತೆಗೆದುಕೊಂಡು, ಮುಂದೆ ಯಾರೂ ಕಟ್ಟುವುದಕ್ಕೆ ಅವಕಾಶ ಕೊಡುವುದಿಲ್ಲ, ಈಗಾಗಲೇ ಕಟ್ಟಿಕೊಂಡಿರತಕ್ಕಂಥವರ ಹೆಸರಿಗೆ ರೆಗ್ಯುಲರೈಸ್ ಮಾಡಬೇಕು. ಇದಕ್ಕೆ ಕಾನೂನು ತಿದ್ದುಪಡಿಗೆ ಅವಕಾಶ ಇದೆ. ನಮ್ಮ ಸರ್ಕಾರ 8-10 ತಿಂಗಳ ಹಿಂದೆ 94-ಬಿ ಎನ್ನುವ ಸೆಕ್ಷನ್ ಅನ್ನು ತಂದು, ಹಿಂದೆ ಸರ್ಕಾರೀ ಜಮೀನಿನಲ್ಲಿ ಯಾರು ಸಾಗುವಳಿ ಮಾಡುತ್ತಿದ್ದರು, ಅವರಿಗೆ ಕಾಲವನ್ನು ವಿಸ್ತರಣೆ ಮಾಡಿ ಈವರೆಗೆ ರೆಗ್ಯುಲರೈಸ್ ಮಾಡುತ್ತಿದ್ದೇವೆ. ಸೆಕ್ಷನ್ 94ಕ್ಕೆ (ಎ) ಇತ್ತು, (ಬಿ) ಸೇರಿಸಿ ಸಾಗುವಳಿ ಭೂಮಿಯನ್ನು ರೆಗ್ಯುಲರೈಸ್ ಮಾಡಲು ಅವಕಾಶ ಮಾಡಿದ್ದೇವೆ. ಇವತ್ತು, ಅದೇ ರೀತಿಯಲ್ಲಿ ಇವರಿಗೆ ರೆಗ್ಯುಲರೈಸ್ ಮಾಡುವಂಥ ಸನ್ನಿವೇಶ ಬಂದಿದೆ. ಇದಕ್ಕೆ ಸೆಕ್ಷನ್ 94(ಸಿ) ಎಂದು ನಾವು ಮಾಡುತ್ತಿದ್ದೇವೆ. ಅದನ್ನು ಈ ಅಧಿವೇಶನದಲ್ಲೇ ತರಬೇಕು ಎನ್ನುವ ಆಸೆ ನನಗೆ ಇದೆ. ಎಲ್ಲವನ್ನೂ ರೆಡಿ ಮಾಡಿ ಇಟ್ಟಿದ್ದೇನೆ. ಅದು ಮಂಜೂರಾದರೆ, ಎಲ್ಲಾ ಕ್ಷೇತ್ರಗಳಲ್ಲಿ ಯಾರ್ಯಾರು ಸರ್ಕಾರಿ ಜಮೀನಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಅವರೆಲ್ಲರಿಗೂ ಹಕ್ಕುಪತ್ರಗಳನ್ನು ಕೊಡತಕ್ಕಂಥ ವ್ಯವಸ್ಥೆ ಆಗುತ್ತದೆ. ಅದು ಈ ಅಧಿವೇಶನದಲ್ಲಿ

ಆಗದಿದ್ದರೆ, ಸುಗ್ರೀವಾಜ್ಞೆಯನ್ನಾದರೂ ಹೊರಡಿಸಿ ಮಾಡಲು ಪ್ರಯತ್ನ ಮಾಡುತ್ತೇವೆ. ಈ ಅಧಿವೇಶನದಲ್ಲೇ ತರಲು ಪ್ರಯತ್ನ ಮಾಡುತ್ತೇನೆ. ಆದರೆ ಬಹಳ ಸಂತೋಷ. ಇಲ್ಲದಿದ್ದರೆ, ಸುಗ್ರೀವಾಜ್ಞೆಯನ್ನು ತಂದು ಅವರೆಲ್ಲರಿಗೂ ನಮ್ಮ ಕಾಲದಲ್ಲೇ, ಇನ್ನು 2-3 ತಿಂಗಳೊಳಗಾಗಿ ಹಕ್ಕುಪತ್ರ ಕೊಡತಕ್ಕಂಥಾದ್ದನ್ನು ಮಾಡುತ್ತೇವೆ, ಇದು ಒಂದು. ಏಲಿನೇಷನ್ ಮಂಜೂರು ಮಾಡುವುದಕ್ಕೆ ಸರ್ವೆ ನಂಬರುಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆದರೆ ಅದು ಅನೇಕ ಕಾರಣಗಳಿಂದ ಮಂಜೂರಾತಿ ಆಗಿಲ್ಲ. ನೀತಿನಿಯಮಗಳ ಪ್ರಕಾರ ಅವರು ಮನೆಗಳನ್ನು ಕಟ್ಟಿಕೊಂಡಿಲ್ಲ. ಆದರೂ ಅವರು ಹತ್ತಾರು ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಏಲನೇಷನ್ ಮಂಜೂರಾತಿ ಆಗದೇ ಇದ್ದರೆ ಅವರಿಗೆ ಏನೂ ತೊಂದರೆ ಇಲ್ಲ. ಅದು ಖಾಸಗಿ ಜಮೀನುಗಳು. ಅದಕ್ಕೆ ತಿದ್ದುಪಡಿ ಅವಶ್ಯಕತೆಯಿಲ್ಲ. ನಾವೇ ರೂಲ್ಸ್ ಬದಲಾವಣೆ ಮಾಡಬಹುದು. ಅದನ್ನು ತಕ್ಷಣ ಮಾಡುತ್ತೇವೆ. ಆದ್ದರಿಂದ ಈ ಎರಡು ತಿದ್ದುಪಡಿಗಳು ಆದರೆ ಬಹುಶಃ ಈ ಎಲ್ಲಾ ತೊಂದರೆಗಳಿಗೆ ಶಾಶ್ವತವಾದ ಪರಿಹಾರ ಸಿಗುತ್ತದೆ. ಅದನ್ನು ನಾವು ಮಾಡುತ್ತೇವೆ.

ಶ್ರೀ ಜಯರಾಮ ಶೆಟ್ಟಿ ಕೆ :— ಧನ್ಯವಾದಗಳು.

(ಎ) ಬಿಜಾಪುರದಲ್ಲಿ ಕೇಂದ್ರೀಯ ಮಹಾವಿದ್ಯಾಲಯ.

ಶ್ರೀ ಶಿವಾನಂದ ಸಿದ್ದರಾಮಪ್ಪ ಪಾಟೀಲ್ (ಟಿಕೋಟಾ) :— ಮಾನ್ಯ ಉಪಾಧ್ಯಕ್ಷರೆ, ಬಿಜಾಪುರದಲ್ಲಿ ಕೇಂದ್ರೀಯ ಮಹಾವಿದ್ಯಾಲಯ ಎಂದು ಒಂದು ಶಾಲೆಯನ್ನು ಕೇಂದ್ರ ಸರ್ಕಾರದ ಹ್ಯೂಮನ್ ರಿಸೋರ್ಸಸ್ ಡೆವಲಪ್‌ಮೆಂಟ್ ಮಿನಿಸ್ಟ್ರಿಯಿಂದ ಮಂಜೂರು ಮಾಡಲಾಗಿದೆ. ಸದರಿ ಶಾಲೆ ಮಂಜೂರಾಗಿ ಈಗಾಗಲೇ ಮೂರು ವರ್ಷ ಕಳೆದಿದೆ. ಅದು ಮಂಜೂರು ಆದಂಥ ಸಂದರ್ಭದಲ್ಲಿ ಬಿಜಾಪುರದ ಜಿಲ್ಲಾಧಿಕಾರಿಯವರು ಸದರಿ ಶಾಲೆಗೆ 14 ಎಕರೆ ಜಮೀನನ್ನು ಕೊಡಬೇಕೆಂದು ಸರ್ಕಾರಕ್ಕೆ ವಿನಂತಿಯನ್ನು ಸಲ್ಲಿಸಿದ್ದರು. ಅದಕ್ಕೆ ಸರ್ಕಾರಿ ಅಧಿಕಾರಿಗಳು ನಾಲ್ಕು ಪಾಯಿಂಟ್ಸ್‌ಗಳಿಗೆ ಕ್ಲಾರಿಫಿಕೇಷನ್ ಕೇಳಿ ಒಂದು ಪತ್ರ ಬರೆದಿದ್ದರು. ಕಳೆದ ಒಂದೂವರೆ ವರ್ಷದ ಹಿಂದೆಯೇ ಜಿಲ್ಲಾಧಿಕಾರಿಯವರು ಸದರಿ ಪಾಯಿಂಟ್ಸ್‌ಗೆ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ 'ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ' ಏನ್ನುವ ಗಾದೆಯಂತೆ ಆಗಿದೆಯೆಂದು ನನಗನ್ನಿಸುತ್ತದೆ. ಸುದ್ಯೆವದಿಂದ ಬಿಜಾಪುರ ಜಿಲ್ಲೆಗೆ ಕೇಂದ್ರೀಯ ಮಹಾವಿದ್ಯಾಲಯ ಶಾಲೆ ಮಂಜೂರು ಆಗಿದ್ದು ಈಗಾಗಲೇ 3 ವರ್ಷ ಗತಿಸಿದೆ. ಶಾಲೆಗೆ ಜಾಗ ಇಲ್ಲದಿರುವುದರಿಂದ ಈ ವರ್ಷ ಮಕ್ಕಳನ್ನು ಶಾಲೆಗೆ ಅಡ್ಮಿಷನ್ ಮಾಡಿಕೊಳ್ಳುವುದೂ ಕೂಡ ನಿಂತು ಹೋಗಿದೆ. ಶಾಲೆಗೆ ಕೇಳಿದಂಥ ಜಾಗ ಗೋಮಾಳ ಜಾಗ ಅಲ್ಲ. ಇದು ಸರ್ಕಾರಿ ಜಮೀನು ಆಗಿರುತ್ತದೆ. ಮತ್ತು ಅಲ್ಲಿ ಈಗಾಗಲೇ ಅನೇಕ ಸಂಸ್ಥೆಗಳಿಗೆ, ಶಾಲೆಗಳಿಗೆ ಜಾಗಗಳನ್ನು ಕೊಟ್ಟಾಗಿದೆ. ಆದರೆ ಸದರಿ ಶಾಲೆಗೆ ಜಮೀನು ನೀಡುವುದಕ್ಕೆ ಸಂಬಂಧಿಸಿದಂತೆ ಕಳೆದ 3 ವರ್ಷದಿಂದ